**ಸಿಸಿ ಃ 163/2024**

**ಚಾಸಾ –4**

**ಪ್ರಾಸಾ –2**

**ಸೋಮವಾರಪೇಟೆ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ ರವರ ನ್ಯಾಯಾಲಯದಲ್ಲಿ**

**ಸಿಸಿ ಃ 163/2024**

ಸಾಕ್ಷಿದಾರರ ಹೆಸರುಃ ಕುಮಾರ
ತಂದೆ/ಗಂಡ ಹೆಸರುಃ ಕಕರುಂಬಯ್ಯ
ವಯಸ್ಸುಃ **43**
ವೃತ್ತಿಃ ಕೂಲಿ
ವಾಸಸ್ಥಳಃ ಮದಾಪುರ ಗ್ರಾಮ ಸೋಮವಾರಪೇಟೆ.
ಸಾಕ್ಷಿಯು ಕ್ರಮವಾಗಿ ಪ್ರಮಾಣಿಕರಿಸಿದ ದಿನಾಂಕಃ **02-08-2024**

ಮುಖ್ಯ ವಿಚಾರಣೆಃ ಎಪಿಪಿಯವರಿಂದ

ನನಗೆ ಚಾಸಾ **3** ರವರ ಪರಿಚಯವಿದೆ. ಮತ್ತು ಆರೋಪಿಯ ಪರಿಚಯ ನನಗೆ ಇದೆ. ಮಹಜರ್ ನಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ **1** ಬಿ ಎಂದು, ಶೋಧನಾ ವಾರೆಂಟ್ ನಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ **2** ಬಿ ಎಂದು ಗುರುತಿಸಲಾಯಿತು, ಸದರಿ ಎರಡು ದಾಖಲೆಗಳಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ, ನನ್ನ ಸಮಕ್ಷಮ ಪೋಲಿಸರು ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಲ್ಲ . ಪೊಲೀಸರ ಕೋರಿಕೆಯ ಮೇರೆಗೆ ಸದರಿ ದಾಖಲೆಗಳಿಗೆ ಸಹಿ ಮಾಡಿರುತ್ತೇನೆ. ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿಲ್ಲ.

**(ಸಾಕ್ಷಿಯು ಅಭಿಯೋಜನೆಗೆ ವ್ಯತಿರಿಕ್ತವಾಗಿ ಸಾಕ್ಷಿ ನುಡಿಯುತ್ತಿರುವುದರಿಂದ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಎಪಿಪಿಯವರು ಪಾಟಿ ಸವಾಲು ನಡೆಸಲು ಅನುಮತಿ ಕೋರಿರುತ್ತಾರೆ. ಅನುಮತಿಸಿದೆ.)**

**ಸಿಸಿ ಃ 163/2024**
**ಚಾಸಾ –4**
**ಪ್ರಾಸಾ –2**

**ಪಾಟಿ ಸವಾಲುಃ ಎಪಿಪಿಯವರಿಂದ**

ದಿಃ **06-03-2024** ರಂದು ಪೊಲೀಸರು ನಿಪಿ **1** ರಂತೆ ಪಂಚನಾಮೆ ಮಾಡಿ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ, ಪಂಚನಾಮೆ ಸಮಯದಲ್ಲಿ **180** ಮಿಲಿಯ **7** ಮತ್ತು **90** ಮಿಲಿಯ **23** ಒರಿಜಿನಲ್ ಡಿಲಕ್ಸ್ ಬ್ರಾಂಡಿಯ ಟೆಟ್ರಾ ಪ್ಯಾಕೇಟ್ ಗಳನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಸದರಿ ದಾಖಲೆಗೆ ಓದಿ ನೋಡಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಈ ಬಗ್ಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ, ಹೇಳಿಕೆಯನ್ನು ನಿಪಿ **4** ಎಂದು ಗುರುತಿಸಲಾಯಿತು. ನಾನು ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟಿ ಸವಾಲುಃ ಕೆ.ಎಸ್.ಪಿ ವಕೀಲರಿಂದ
**ಇಲ್ಲ.**
ಮರು ವಿಚಾರಣೆ ಇಲ್ಲ.
**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು** ಮಾಡಲಾಗಿದೆ**).**

ಸಹಿ/-
**ಓ ಹೇ ಕೇ ಸರಿ ಇದೆ**

**ಪ್ರ ದ ನ್ಯಾ ದಂ ಸೋ ಪೇಟೆ**